# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 331 |
| ಸದಸ್ಯರ ಹೆಸರು | : | ಶ್ರೀ ಬಿ.ಎಂ. ಫಾರೂಖ್<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 15-02-2023 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು, ಉಳ್ಳಾಲ-ತೊಕ್ಕೊಟ ಪ್ರದೇಶದಲ್ಲಿ ರಾಷ್ಟ್ರೀಯ ಹೆದ್ದಾರಿಯಿಂದ ಉಳ್ಳಾಲಕ್ಕೆ ತಿರುಗುವ ಮತ್ತು ಉಳ್ಳಾಲದಿಂದ ರಾಷ್ಟ್ರೀಯ ಹೆದ್ದಾರಿಗೆ ಸರ್ವಿಸ್ ರಸ್ತೆಯಿಂದ ಪ್ರವೇಶಿಸುವ ಸ್ಥಳಗಳು ಅತ್ಯಂತ ಅಪಾಯಕಾರಿ/ ಅಪಘಾತ ಸ್ಥಳವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ದಕ್ಷಿಣ ಕನ್ನಡ ಜಿಲ್ಲೆಯ ಮುಖಾಂತರ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿ-66 ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಕಾರ್ಯ ವ್ಯಾಪ್ತಿಗೆ ಒಳಪಡುತ್ತದೆ. ಸದರಿ ಹೆದ್ದಾರಿಯ ಕಿ.ಮೀ.10.00 ರಲ್ಲಿ ಬಲಭಾಗದಿಂದ ಉಳ್ಳಾಲಕ್ಕೆ ಸೇರುವ ರಸ್ತೆಯ ಭಾಗವು Three legged T-type minor junction ಆಗಿದ್ದು ಈ ಭಾಗವನ್ನು ಪೋಲೀಸ್ ಇಲಾಖೆಯಿಂದಾಗಲಿ ಅಥವಾ ಕೇಂದ್ರ ಭೂಸಾರಿಗೆ ಮಂತ್ರಾಲಯದಿಂದಾಗಲಿ, ಕಪ್ಪು ಸ್ಥಳವೆಂದು ಗುರುತಿಸಿರುವುದಿಲ್ಲ.<br><br>ಅದಾಗ್ಯೂ, ಈ ಭಾಗದಲ್ಲಿ ಸಂಚಾರ ದಟ್ಟಣೆ ತಗ್ಗಿಸಲು ಹಾಗೂ ಅಪಘಾತಗಳನ್ನು ತಡೆಯುವ ದೃಷ್ಟಿಯಿಂದ ಮುನ್ನೆಚ್ಚರಿಕೆ ಕ್ರಮವಾಗಿ ರಿಯಾಯ್ತಿ ಕರಾರಿನನ್ವಯ ರಿಯಾಯ್ತಿದಾರರು ಅಭಿವೃದ್ಧಿಪಡಿಸಿ ಸೈನ್ ಬೋರ್ಡ್‌ಗಳು, ರೋಡ್ ಮಾರ್ಕಿಂಗ್‌ಗಳು ಇತರೆ ಸುರಕ್ಷತಾ ಕ್ರಮಗಳನ್ನು ಸಹ ಕೈಗೊಂಡಿರುತ್ತಾರೆ. |
| ಆ) | ಹಾಗಿದ್ದಲ್ಲಿ, ಈ ಬಗ್ಗೆ ಕಾರಣಗಳ ಕುರಿತಾಗಿ ವರದಿ ತರಿಸಲಾಗಿದೆಯೇ; (ವಿವರ ನೀಡುವುದು). | |
| ಇ) | ಸದರಿ "ಸ್ಥಳ"ಗಳನ್ನು ಸುರಕ್ಷಿತವಾಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; | |
| ಈ) | ಸದರಿ ಸ್ಥಳಗಳಲ್ಲಿ ಬೆಳಗ್ಗೆ, ಸಾಯಂಕಾಲದ ಸಂಚಾರ ದಟ್ಟಣೆ ಪರಿಹಾರಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು? | |

ಕಡತ ಸಂಖ್ಯೆ: ಲೋಇ 39 ಸಿಎನ್‌ಹೆಚ್ 2023 (ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು